5

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ. ಹನುಮಂತ ರುದ್ರಪ್ಪ ನಿರಾಣಿ ಇವರು ಪ್ರಸ್ತಾಪಿಸಿರುವ ಶೂನ್ಯವೇಳೆಯ ಸೂಚನೆಗೆ ಉತ್ತರಿಸುವ ಬಗ್ಗೆ:-**

**ವಿಷಯ:-**

ಇತ್ತೀಚಿಗೆ ತಂತ್ರಜ್ಞಾನ ಆದಾರಿತ ಸ್ಮಾರ್ಟ್ ಬೋರ್ಡ್, ಡಿಜಿಟಲ್ ಕ್ಲಾಸ್‌ಗಳಲ್ಲಿ ಬೋಧನೆ ಮಾಡುವ ಮೂಲಕ ಮಕ್ಕಳನ್ನು ಆಧುನಿಕ ಜಗತ್ತಿಗೆ ತಯಾರುಗೊಳಿಸಿ ಮಾನವ ಸಂಪನ್ಮೂಲವನ್ನು ಮೇಲ್ದರ್ಜೆಗೆ ಏರಿಸಬೇಕಿದೆ, ಕಲಿಕೆಯ ಒಂದು ಭಾಗ ಮೌಲ್ಯಮಾಪನ, ಮೌಲ್ಯಮಾಪನವೇ ಬೋಧನೆ ಎಂದು ಇತ್ತೀಚಿಗೆ ಸರ್ಕಾರವು ಜಾರಿ ಮಾಡಿರುವ (Lesson Based Assessment) ಅಂದರೆ ಘಟಕ ಆಧಾರಿತ ಪರೀಕ್ಷೆಯು ನಮ್ಮ ಶಿಕ್ಷಕರಿಗೆ ಹಾಗೂ ವಿಧ್ಯಾರ್ಥಿಗಳಿಗೆ ಹೊರೆಯಾಗುತ್ತಿರುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಬೇಕಾದ ವಿಷಯವಾಗಿದೆ. ಪ್ರಶ್ನೆ ಪತ್ರಿಕೆಗಳ ತಯಾರಿಕೆ, ಉತ್ತರ ಪತ್ರಿಕೆಗಳ ಮೌಲ್ಯಮಾಪನ, ನಂತರ ಅಂಕಗಳನ್ನು ತಂತ್ರಾಂಶದಲ್ಲಿ ಇಂದಿಕರಿಸುವುದು ಹಾಗೂ ಇನ್ನಷ್ಟು ಪ್ರಕ್ರಿಯೆಗಳನ್ನು ಒಳಗೊಂಡಿದೆ. ಆದರೆ ಇದೆಲ್ಲವನ್ನು ಶಿಕ್ಷಕರೇ ಮಾಡುತ್ತಾ ಕುಳಿತರೆ ಭೋದನೆಗೆ ಸಮಯವಕಾಶ ಸಿಗದಂತಾಗುವುದು ಸರ್ಕಾರದ ಗಮನಕ್ಕೆ ಬಾರದೆ ಇರುವುದು ನೋವಿನ ಸಂಗತಿಯಾಗಿದೆ. ಇದರಿಂದ ಮಕ್ಕಳು ಭಯಭೀತಗೊಂಡು ಮಾನಸಿಕ ಖಿನ್ನತೆಗೆ ಒಳಗಾಗುತ್ತಿದ್ದಾರೆ. ಪಠ್ಯೇತರ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿಲ್ಲ, ಸರ್ಕಾರದ ಇಂತಹ ನಿರ್ಧಾರಗಳಿಂದ ಮಕ್ಕಳ ವ್ಯಕ್ತಿತ್ವ ಬೆಳವಣಿಗೆಯಲ್ಲಿ ಏರುಪೇರುಗಳಾಗುತ್ತಿರುವುದನ್ನು ಸರ್ಕಾರವು ಗಮನಿಸಬೇಕಾದ ಅಂಶವಾಗಿದೆ. ಒಂದು ವರ್ಷಕ್ಕೆ ಪ್ರತಿ ಶಿಕ್ಷಕನಿಗೆ 2025-26 ನೇ ಸಾಲಿನಲ್ಲಿ 242 ದಿನಗಳು, ಲಭ್ಯವಾಗುತ್ತಿವೆ ಹಾಗೂ ಒಟ್ಟು 350 ಪಾಠಗಳು 8 9 & 10ನೇ ತರಗತಿಗಳಿವೆ. ಕನ್ನಡ ಶಿಕ್ಷಕರು 66, ಇಂಗ್ಲಿಷ್ ಶಿಕ್ಷಕರು 60, ಹಿಂದಿ ಶಿಕ್ಷಕರು 51, ಗಣಿತ ಶಿಕ್ಷಕರು 39, ವಿಜ್ಞಾನ ಶಿಕ್ಷಕರು 38, ಸಮಾಜ ವಿಜ್ಞಾನ ಶಿಕ್ಷಕರಂತೂ 96 ಪರೀಕ್ಷೆಗಳನ್ನು ನಡೆಸಬೇಕು ಅದಕ್ಕೆ ಸಂಬಂಧಿಸಿದಂತೆ ಪ್ರಶ್ನೆ ಪತ್ರಿಕೆ ಸಿದ್ವತೆ, ಮುದ್ರಣ ಸಂಘಟನೆ, ಮೌಲ್ಯಮಾಪನ ಅಂಕಗಳನ್ನು ಅಂತರ್ಜಾಲದಲ್ಲಿ ಇಂದಿಕರಿಸುವುದು. ಘಟಕ ಆಧಾರಿತ ಪರೀಕ್ಷೆಯ ಜೊತೆಗೆ ಪ್ರತಿ ವಿಷಯದ ಶಿಕ್ಷಕರು 4 ರೂಪನಾತ್ಮಕ ಪರೀಕ್ಷೆಗಳು 2 ಸಂಕಲನಾತ್ಮಕ ಪರೀಕ್ಷೆಗಳು ಮತ್ತು 10ನೇ ತರಗತಿಗೆ 2-3 ಸರಣಿ ಪರೀಕ್ಷೆಗಳನ್ನು ನಡೆಸುವ ಹೊಣೆಗಾರಿಕೆಯೂ ಸಹಿತ ಇವರ ಮೇಲೆ ಇರುವುದು.

ಇದರಿಂದಾಗಿ ನಮ್ಮ ಶಿಕ್ಷಕರು ತಮ್ಮನ್ನು ತಾವೇ ಶಪಿಸಿಕೊಳ್ಳುವಂತಹ ವಾತಾವರಣವನ್ನು ನಿರ್ಮಾಣವಾಗಿರುವುದು ದುರದೃಷ್ಟಕರ, ಶಿಕ್ಷಕರುಗಳು ಮಕ್ಕಳ ಜೊತೆಗೆ ಬೆರೆತು ಮಕ್ಕಳ ಭಾವನೆಗಳನ್ನು ಅರಳಿಸಬೇಕಾಗುವುದು ಶಿಕ್ಷಕರ ಕೆಲಸ ಭಾರತೀಯ ವ್ಯವಸ್ಥೆಯಲ್ಲಿ ಶಿಕ್ಷಕರಿಗೆ ಮಹೋನ್ನತ ಗೌರವವಿದೆ ಆ ಮಹೋನ್ನತ ಗೌರವವನ್ನು ನಾವೆಲ್ಲರೂ ಗೌರವಿಸಬೇಕಾಗರುವುದು ಮಹತ್ತರ ಸರ್ಕಾರದ ಕಾರ್ಯವಾಗಿದೆ.

ಹಾಗೂ ಸರ್ಕಾರವು ಇತ್ತೀಚಿಗೆ ಎಲ್. ಬಿ. ಎ ಆದೇಶಕ್ಕೆ ಸಂಬಂದಿಸಿದಂತೆ ಪರೀಕ್ಷೆಗಳನ್ನು ಸಂಘಟಿಸಲು ಮುದ್ರಣ ವೆಚ್ಚ, ಅಂತರ್ಜಾಲದಲ್ಲಿ ಇಂದಿಕರಿಸಲು ತಜ್ಞ ಸಿಬ್ಬಂದಿಯ (ಕಚೇರಿ ಸಹಾಯಕರು) ಸರ್ಕಾರವು ಒದಗಿಸಿದೆಯೇ? ಪರೀಕ್ಷೆಗಳನ್ನು ಸಂಘಟಿಸಲು ಬೇಕಾಗುವ ವೆಚ್ಚವನ್ನು ನಿರ್ವಹಿಸಲು ಮುಖ್ಯ ಶಿಕ್ಷಕರಿಗೆ ಸರ್ಕಾರವು ಅನುದಾನವನ್ನು ಒದಗಿಸಿದೆಯೇ? ಇಲ್ಲವಾದರೆ ಎಲ್. ಬಿ. ಎ ಗೆ ತಗಲುವ ವೆಚ್ಚವನ್ನು ಮಕ್ಕಳ ಮೇಲೆ ಬರಿಸಲು ಸರ್ಕಾರ ಆದೇಶವೇನಾದರೂ ಮಾಡಿದೆಯೇ? ಇಂಥ ಸಂದರ್ಭದಲ್ಲಿ ಮುಖ್ಯ ಶಿಕ್ಷಕ ತ್ರಿಶಂಕು ಸ್ಥಿತಿಯಲ್ಲಿರುವನು, ಆತನ ನೋವನ್ನು ಕೇಳುವವರು ಯಾರು? ಇಲ್ಲವಾದರೆ ಆತ ಕೈಲಿಂದ ಬರಿಸಬೇಕೇ? ಈ ಕುರಿತು ಸರ್ಕಾರ ಸ್ಪಷ್ಟವಾಗಿ ಉತ್ತರವನ್ನು ಒದಗಿಸಬೇಕು.

ಮೇಲಿನ ಎಲ್ಲ ಅಂಶಗಳನ್ನು ಕುರಿತು ಸರ್ಕಾರವು ಗಂಭೀರವಾಗಿ ಮತ್ತೊಮ್ಮೆ ಪರಿಶೀಲಿಸಿ ಈಗಾಗಲೇ ಹೊರಡಿಸಿದ ಆದೇಶವನು ಹಿಂಪಡೆಯುವಂತೆ ಸರ್ಕಾರವನ್ನು ತಮ್ಮ ಮೂಲಕ ಶೂನ್ಯ ವೇಳೆಯಲ್ಲಿ ಮಾನ್ಯ ಪ್ರಾಥಮಿಕ & ಪ್ರೌಢ ಶಿಕ್ಷಣ ಸಚಿವರನ್ನು ಒತ್ತಾಯಿಸುತ್ತೇನೆ.

**ಉತ್ತರ :**

2023-24 ಮತ್ತು 2024-25ನೇ ಸಾಲಿನ ಎಸ್. ಎಸ್. ಎಲ್.ಸಿಯ ಮೂರು ಪರೀಕ್ಷೆಗಳ ಒಟ್ಟಾರೆ ಫಲಿತಾಂಶವನ್ನು ಪರಿಶೀಲಿಸಿದಾಗ, ಶಾಲಾ ವಿದ್ಯಾರ್ಥಿಗಳ ಭಾಷಾ, ಗಣಿತ ಹಾಗೂ ಇತರೇ ವಿಷಯಗಳ ಕಲಿಕಾ ಸಾಮರ್ಥ್ಯಗಳು ಕುಂಠಿತವಾಗಿರುವುದನ್ನು ಪ್ರತಿಬಿಂಬಿಸುತ್ತದೆ. ಇದನ್ನು ಹಲವು ಶೈಕಣಿಕ ವರದಿಗಳು ಸಹ ದೃಢೀಕರಿಸಿವೆ.

ಅಸರ್ ವರದಿ-2024 ಹಾಗೂ PARAKH Rashtriya Sarvekshan 2024 ರ ಸಮೀಕ್ಷೆಗಳಲ್ಲಿ Literacy ಮತ್ತು Numeracy ಎರಡರಲ್ಲಿಯೂ 1ನೇ ತರಗತಿಯಿಂದ ಮುಂದುವರೆದ ತರಗತಿಗಳಲ್ಲಿ ವಿದ್ಯಾರ್ಥಿಗಳ ಕಲಿಕಾ ಸಾಧನೆಯು ಕಡಿಮೆಯಾಗಿರುವುದರಿಂದ 10ನೇ ತರಗತಿಯ ಫಲಿತಾಂಶದ ಮೇಲೆ ಪರಿಣಾಮ ಬೀರಿದೆ.

**ಅಸರ್ ವರದಿ-2024 (ಓದುವುದು)**

Table % children by grade and reading level [ಸ್ಯಾಂಪಲ್ ಸಮೀಕ್ಷೆ]

| Standard | Not even letter | Letter | Word | Std I level text | Std II level text | Total |
|---|---|---|---|---|---|---|
| I. | 32.7 | 39.8 | 21.8 | 4.6 | 1.1 | 100 |
| II. | 14.4 | 31.4 | 36.2 | 12.4 | 5.6 | 100 |
| III. | 7.1 | 19.3 | 36.2 | 21.5 | 15.9 | 100 |
| IV. | 4.4 | 12.6 | 30.4 | 27.5 | 25.1 | 100 |
| V. | 3.0 | 10.8 | 21.9 | 30.3 | 34.0 | 100 |
| VI. | 3.0 | 6.0 | 17.6 | 30.9 | 42.5 | 100 |
| VII. | 1.3 | 4.8 | 15.2 | 26.7 | 52.1 | 100 |
| VIII. | 1.2 | 3.7 | 11.2 | 21.8 | 62.1 | 100 |

**ಅಸರ್ ವರದಿ-2024 ಗಣಿತ [ಲೆಕ್ಕಾಚಾರ-Arithmetic]**

Table % children by grade and arithmetic level

| Standard | Not even 1-9 | Recognise numbers | | Subtract | Divide | Total |
|---|---|---|---|---|---|---|
| | | 1-9 | 11-99 | | | |
| I. | 26.3 | 35.8 | 35.0 | 2.6 | 0.3 | 100 |
| II. | 9.7 | 25.6 | 53.2 | 10.5 | 1.0 | 100 |
| III. | 4.8 | 16.3 | 53.0 | 22.4 | 3.5 | 100 |
| IV. | 2.9 | 9.1 | 45.7 | 29.6 | 12.6 | 100 |
| V. | 1.5 | 7.2 | 39.5 | 30.9 | 20.9 | 100 |
| VI. | 1.6 | 4.0 | 34.8 | 32.0 | 27.7 | 100 |

| | | | | | | |
|---|---|---|---|---|---|---|
| VII. | 0.8 | 3.4 | 31.9 | 29.2 | 34.9 | 100 |
| VIII. | 0.6 | 1.8 | 30.4 | 29.4 | 37.9 | 100 |

**PARAKH Rashtriya Sarvekshan 2024** ಅನುಸಾರ ಕರ್ನಾಟಕ ರಾಜ್ಯದ 3ನೇ, 6ನೇ ಮತ್ತು 9ನೇ ತರಗತಿ ವಿದ್ಯಾರ್ಥಿಗಳ ಸಾಧನೆ ಈ ಕೆಳಕಂಡಂತೆ ಇರುತ್ತದೆ.

3ನೇ ತರಗತಿ:

| **ಕ್ರಸಂ** | **ಶಾಲೆಯ ವಿಧ** | **ಭಾಷೆ** | **ಗಣಿತ** |
|---|---|---|---|
| 1 | ಸರ್ಕಾರಿ | 60% | 59% |
| 2 | ಅನುದಾನಿತ | 61% | 57% |

6ನೇ ತರಗತಿ:

| **ಕ್ರಸಂ** | **ಶಾಲೆಯ ವಿಧ** | **ಭಾಷೆ** | **ಗಣಿತ** | **ಪರಿಸರ** |
|---|---|---|---|---|
| 1 | ಸರ್ಕಾರಿ | 48% | 40% | 42% |
| 2 | ಅನುದಾನಿತ | 51% | 41% | 43% |

9ನೇ ತರಗತಿ:

| **ಕ್ರಸಂ** | **ಶಾಲೆಯ ವಿಧ** | **ಭಾಷೆ** | **ಗಣಿತ** | **ವಿಜ್ಞಾನ** | **ಸಮಾಜ ವಿಜ್ಞಾನ** |
|---|---|---|---|---|---|
| 1 | ಸರ್ಕಾರಿ | 42% | 29% | 32% | 33% |
| 2 | ಅನುದಾನಿತ | 45% | 29% | 33% | 34% |

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ವೃದ್ಧಿಸಲು ಹಾಗೂ ಫಲಿತಾಂಶವನ್ನು ಸುಧಾರಿಸುವ ನಿಟ್ಟಿನಲ್ಲಿ ಈ ಹಿಂದೆ ಕೈಗೊಳ್ಳುತ್ತಿದ್ದ ಘಟಕ ಪರೀಕ್ಷೆಗಳಂತೆಯೇ **(Unit Tests)** ಹಾಗೂ ಅದರ ಪರ್ಯಾಯವಾಗಿ ಪಾಠ ಆಧಾರಿತ ಮೌಲ್ಯಮಾಪನ - **Lesson Based Assessment (LBA)** ಕ್ರಮವನ್ನು ಜಾರಿಗೊಳಿಸಿದೆ. ಇದರಿಂದ ಕಲಿಕೆಯ ಪ್ರತಿ ಹಂತದಲ್ಲಿ ವಿದ್ಯಾರ್ಥಿಗಳ ಕಲಿಕಾ ಫಲಗಳನ್ನು ಮತ್ತಷ್ಟು ಉತ್ತಮಗೊಳಿಸಲು ಹಾಗೂ ವಿದ್ಯಾರ್ಥಿಗಳ ಕಲಿಕಾ ಶ್ರಮವನ್ನು ತಗ್ಗಿಸಲು ಸಹಾಯಕವಾಗಿದೆ. ಘಟಕ ಪರೀಕ್ಷೆಗಳ ಮೌಲ್ಯಮಾಪನದ ದತ್ತಾಂಶಗಳನ್ನು ಭೌತಿಕ ಕಡತದಲ್ಲಿ ನಿರ್ವಹಿಸಲಾಗುತ್ತಿತ್ತು. ಅದನ್ನು ಸರಳೀಕರಿಸಿ ಒಂದು ಬಾರಿ ಮಾತ್ರ Students Achievement Tracking System (SATS) ತಂತ್ರಾಂಶದಲ್ಲಿ ಇಂದೀಕರಿಸಲಾಗುತ್ತಿದೆ. ಆದ್ದರಿಂದ, LBA ಅನ್ನು ಪರಿಣಾಮಕಾರಿಯಾಗಿ ಹಾಗೂ ಶಿಕ್ಷಕ ಸ್ನೇಹಿಯಾಗಿ ನಿರ್ವಹಿಸಲು ಈ ಮುಂದಿನಂತೆ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿಯ ಅನುಮೋದಿತ ಅನುದಾನದಲ್ಲಿ Lesson Based Assessment ಕಾರ್ಯಕ್ರಮಕ್ಕೆ ರೂ.611.864 ಲಕ್ಷಗಳನ್ನು ನಿಗದಿಪಡಿಸಿದ್ದು, ಕೇಂದ್ರ ಸರ್ಕಾರ ಮೊದಲ ಕಂತಿನ ಅನುದಾನ ಬಿಡುಗಡೆ ಮಾಡಿದ ತಕ್ಷಣ ಶಾಲೆಗಳಿಗೆ ನಿಯಮಗಳಂತೆ ಅನುದಾನ ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು.
2. LBA ಪ್ರಕ್ರಿಯೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಸಂಬಂಧ ಶಿಕ್ಷಕರಿಗೆ ಅಗತ್ಯವಾದ ವಿವರಗಳು ಹಾಗೂ ಮಾರ್ಗಸೂಚಿಗಳನ್ನು ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ರವರು **ದಿನಾಂಕ: 16.07.2025** ರಂದು ಹೊರಡಿಸಿರುತ್ತಾರೆ.

3. ಸದರಿ ಸುತ್ತೋಲೆಯ ಅಂಶಗಳ ಕುರಿತು ಶಿಕ್ಷಕರು, ಶಿಕ್ಷಕರ ಪ್ರತಿನಿಧಿಗಳು ಹಾಗೂ ಇತರೇ ಸಂಘ-ಸಂಸ್ಥೆಗಳ / ಭಾಗಿದಾರರ ಅಭಿಪ್ರಾಯಗಳಂತೆ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ LBA ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಸರಳೀಕರಣಗೊಳಿಸಿದೆ. ಅದರಲ್ಲಿ 1 ರಿಂದ 5ನೇ ತರಗತಿಗೆ 15 ಅಂಕಗಳಿಗೆ (10 ಲಿಖಿತ + 5 ಮೌಖಿಕ), 6 ರಿಂದ 10ನೇ ತರಗತಿಯವರೆಗೆ 20 ಅಂಕಗಳಿಗೆ LBA ಮಾಡಲು, ಭಾಷೆಗಳಲ್ಲಿ ಒಂದು ಪಾಠ ಮತ್ತು ಒಂದು ಪದ್ಯ ಸೇರಿಸಿ ಒಂದು LBA ಹಾಗೂ ಸಮಾಜ ವಿಜ್ಞಾನದಲ್ಲಿ 3 ಪಾಠಗಳಿಗೆ ಒಂದು LBA ಮಾಡಲು ತಿದ್ದುಪಡಿ ಸುತ್ತೋಲೆಯನ್ನು **ದಿನಾಂಕ: 08.08.2025** ರಂದು ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ರವರು ಹೊರಡಿಸಿರುತ್ತಾರೆ.
4. 2025-26ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಕರ್ನಾಟಕದಲ್ಲಿ ಪಾಠ ಆಧಾರಿತ ಮೌಲ್ಯಾಂಕನವನ್ನು (Lesson Based Assessment) ಅಳವಡಿಸುವ ಸಂಬಂಧ ರಾಜ್ಯ ಪಠ್ಯಕ್ರಮದ ಶಾಲೆಗಳ 1 ರಿಂದ 10ನೇ ತರಗತಿಯ ವಿದ್ಯಾರ್ಥಿಗಳ ಕಲಿಕೆಯನ್ನು ಸಾಧಿಸಲು ಹಾಗೂ ಪ್ರತಿ ಪಾಠದ ನಂತರ ಮಗುವಿನ ಕಲಿಕೆಯನ್ನು ದೃಢೀಕರಿಸಲು ಪಾಠ ಆಧಾರಿತ ಮೌಲ್ಯಾಂಕನ ಪ್ರಶ್ನೆಕೋಠಿಯನ್ನು ಸಿದ್ಧಪಡಿಸಿ DSERT Website ನಲ್ಲಿ ಅಳವಡಿಸಲಾಗಿದೆ. ಸದರಿ ಪ್ರಶ್ನೆಕೋಠಿಯನ್ನು ಕಲಿಕಾ ಪ್ರಕ್ರಿಯೆಯಿಂದ ಮೌಲ್ಯಾಂಕನ ಪ್ರಕ್ರಿಯೆಯವರೆಗೆ ಎಲ್ಲಾ ಹಂತದಲ್ಲೂ ನಿರಂತರವಾಗಿ ಬಳಸುವ ಸಂಬಂಧ ಹಾಗೂ ಅನುಷ್ಠಾನ, ಮೇಲ್ವಿಚಾರಣೆ ಹಾಗೂ ಅನುಪಾಲನೆ ಸಂಬಂಧ ಸುತ್ತೋಲೆ, You Tube Live, VC & Webinar ಗಳ ಮೂಲಕ ಮಾರ್ಗದರ್ಶನ ನೀಡಿದೆ.
5. ಶಿಕ್ಷಕರಿಗೆ ತಂತ್ರಜ್ಞಾನ ಬಳಕೆ ಸಂಬಂಧ Induction & Technology Assisted Learning Program (TALP) ತರಬೇತಿ ನೀಡಲಾಗಿದ್ದು, ಶಿಕ್ಷಕರು ಅಂತರ್ಜಾಲವನ್ನು ಇಂದೀಕರಿಸುವ ಜ್ಞಾನ ಹೊಂದಿರುತ್ತಾರೆ.
6. ಘಟಕ ಪರೀಕ್ಷೆ ಹಾಗೂ ಇತರೇ ಪರೀಕ್ಷೆಗಳ ಮೌಲ್ಯಮಾಪನದ ದತ್ತಾಂಶಗಳನ್ನು ಭೌತಿಕ ಕಡತಗಳಲ್ಲಿ ನಿರ್ವಹಿಸಲಾಗುತ್ತಿತ್ತು. ಪ್ರಸ್ತುತ LBA ಜಾರಿಯಾದ ನಂತರ ಕೇವಲ Students Achievement Tracking System (SATS) ತಂತ್ರಾಂಶದಲ್ಲಿ ಒಂದು ಬಾರಿ ಮೌಲ್ಯಮಾಪನದ ಮಾಹಿತಿಯನ್ನು ಇಂದೀಕರಿಸಲು ತಿಳಿಸಲಾಗಿದ್ದು, ಭೌತಿಕ ಕಡತ / ವಹಿಗಳನ್ನು ನಿರ್ವಹಿಸುವ ಅವಶ್ಯಕತೆ ಇರುವುದಿಲ್ಲ.
7. SATS ತಂತ್ರಾಂಶವನ್ನು ಮಕ್ಕಳ LBA ವಿವರಗಳನ್ನು ದಾಖಲಿಸಲು ಸಹಾಯಕವಾಗುವಂತೆ ಸರಳೀಕರಣಗೊಳಿಸಲಾಗಿದೆ.
8. SATS ನಲ್ಲಿ ಅಂಕಗಳನ್ನು ದಾಖಲಿಸುವುದರಿಂದ ವಿವಿಧ ರೀತಿ ವಿಶ್ಲೇಷಣಾ ವರದಿಗಳನ್ನು ಪಡೆದು ಶಿಕ್ಷಕರು ಕಾರ್ಯ ತಂತ್ರಗಳನ್ನು ರೂಪಿಸಿ ಬೋಧನೆ ಮಾಡಲು ಅನುಕೂಲಕರವಾಗಿದೆ ಹಾಗೂ ಇದರಿಂದಾಗಿ ಭೌತಿಕ ದಾಖಲೆಗಳ ನಿರ್ವಹಣೆ ಕಡಿಮೆಯಾಗುತ್ತದೆ.
9. LBA ಮೌಲ್ಯಾಂಕನ ವೆಚ್ಚವನ್ನು ಮಕ್ಕಳಿಂದ ಭರಿಸಲು ಇಲಾಖೆಯು ಯಾವುದೇ ಸೂಚನೆ / ಆದೇಶವನ್ನು ಮಾಡಿರುವುದಿಲ್ಲ. ಹಿಂದೆ ಘಟಕ ಪರೀಕ್ಷೆಯನ್ನು ನಿರ್ವಹಿಸುತ್ತಿದ್ದಂತೆ, LBA ನಿರ್ವಹಿಸಲು ಮಾರ್ಗದರ್ಶನ ನೀಡಿದೆ.
10. LBA ಮೌಲ್ಯಾಂಕನ ಪ್ರಕ್ರಿಯೆಯು ಸರಳವಾದ ಮೌಲ್ಯಮಾಪನ ಕ್ರಮವಾಗಿದ್ದು, ಇದರಿಂದ ಶಿಕ್ಷಕರಿಗೆ ಯಾವುದೇ ರೀತಿಯಿಂದ ತೊಂದರೆ ಇಲ್ಲ.

**ಸಂಖ್ಯೆ: ಇಪಿ 69 ಇಜಿಓವಿ 2025**

**ಎಸ್.ಮಧುಬಂಗಾರಪ್ಪ**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**